



# ತಂಜಾವೂರ ಕಲೆಗೆ ಮನಸೋತು

ಭರತನಾಟ್ಯ– ಕರ್ನಾಟಕ ಶಾಸ್ತ್ರೀಯ ಸಂಗೀತದ ತವರಿನಂತೆ ಇರುವ ತಂಜಾವೂರಿಗೆ ಅಲ್ಲಿನ ಶಿಲ್ಪಕಲೆ ವೈಭವವನ್ನು ನೋಡಲು ಹೋಗಬೇಕು.

■ ಚಿತ್ರ ಲೇಖನ: **ಪದ್ಮರಾಜ ದಂಡಾವತಿ**

ಬೃಹತ್ ಆದುದು ಅಂದರೆ ಏನು? ಈ ಪ್ರಶ್ನೆಗೆ ಉತ್ತರ ಬೇಕು ಎಂದರೆ ನೀವು ತಂಜಾವೂರಿನ ಬೃಹದೀಶ್ವರ ದೇವಸ್ಥಾನ ನೋಡಲು ಹೋಗಬೇಕು. 11ನೇ ಶತಮಾನದ ಆದಿಯಲ್ಲಿ ಚೋಳ ರಾಜರ ರಾಜಧಾನಿಯಾಗಿದ್ದ ಈ ದೇವಸ್ಥಾನ ಎಷ್ಟು ಬೃಹತ್ ಆಗಿದೆ ಎಂದರೆ ಇದನ್ನು ಕೇವಲ ಏಳು ವರ್ಷದಲ್ಲಿ ನಿರ್ಮಿಸಿ ಮುಗಿಸಿದರೇ ಎಂದು ಅಚ್ಚರಿಯಾಗುತ್ತದೆ. 45 ಎಕರೆ ಪ್ರದೇಶದಲ್ಲಿ ವಿಸ್ತರಿಸಿರುವ ಈ ದೇವಸ್ಥಾನ ಸಂಪೂರ್ಣ ಶಿಲಾಮಯವಾದುದು. 'ಪೆರಿಯ ಕೋವಿಲ್' ಎಂದೂ ಹೆಸರಾಗಿರುವ ಈ ದೇವಾಲಯದ ನಿರ್ಮಾಣಕ್ಕೆ ದೊಡ್ಡ ದೊಡ್ಡ ಬಂಡೆ ಕಲ್ಲುಗಳನ್ನು ಬಳಸಿದ್ದಾರೆ. ಅವುಗಳನ್ನು ಜೋಡಿಸಲು ಗಾರೆಯನ್ನು ಬಳಸಿಲ್ಲ. ಮತ್ತೆ ಹೇಗೆ ಜೋಡಿಸಿ ಸಾವಿರ ವರ್ಷ ಕಳೆದರೂ ಅಲುಗಾಡದಂತೆ ನಿಲ್ಲಿಸಿದರು ಎಂದರೆ ಅದು ದ್ರಾವಿಡ ಶಿಲ್ಪಕಲೆಯ ವಿಸ್ಮಯ ಅಥವಾ ವೈಭವ ಎಂದು ಹೇಳಬೇಕು ಅಷ್ಟೇ. ಇಲ್ಲವಾಗಿದ್ದರೆ ಅದಕ್ಕೂ ನಮ್ಮ ಹಂಪಿಯ ಹಾಗೆ ಯುನೆಸ್ಕೊ ಪಾರಂಪರಿಕ ಶಿಲ್ಪಕಲೆಯ ಮಾನ್ಯತೆ ಸಿಗುತ್ತಿರಲಿಲ್ಲವೇನೋ?



ನಟರಾಜ

66 ಮೀಟರ್ ಎತ್ತರದ ಈ ದೇವಸ್ಥಾನದ ಮೇಲೆ 80 ಟನ್ ಭಾರದ ಗೋಪುರದ ಶಿಲೆ ಭದ್ರವಾಗಿ ಕುಳಿತಿದ್ದರೆ ಅದರ ಶಕ್ತಿಗೆ ಪೂರಕ ಎನ್ನುವ ಹಾಗೆ ಅಷ್ಟೇ ಭಾರದ 8.7 ಮೀಟರ್ ಎತ್ತರದ ಭವ್ಯ ಶಿವಲಿಂಗ ಗರ್ಭಗುಡಿಯಲ್ಲಿ ಇದೆ. ತಂಜಾವೂರಿನಲ್ಲಿ ಎಲ್ಲವೂ ಬೃಹತ್ ಸ್ವರೂಪದ್ದು. ದೇವಸ್ಥಾನದ ಪ್ರವೇಶದಲ್ಲಿ ಇರುವ ನಂದಿಯ ವಿಗ್ರಹ ಕೂಡ ಅಷ್ಟೇ ಭವ್ಯವಾಗಿದೆ. ಈ ವಿಗ್ರಹದ ಭಾರ 25 ಟನ್. 13 ಅಡಿ ಎತ್ತರ 16 ಅಡಿ ಅಗಲದ ಈ ವಿಗ್ರಹವನ್ನು 16ನೇ ಶತಮಾನದಲ್ಲಿ ತಂಜಾವೂರು ಆಳಿದ ನಾಯಕ ಅರಸರು ನಿರ್ಮಿಸಿದರು. ಚೋಳರ ಕಾಲದಲ್ಲಿ ಈ ಜಾಗದಲ್ಲಿ ಒಂದು ಪುಟ್ಟ ನಂದಿ ವಿಗ್ರಹ ಇತ್ತು ಎಂದು ನಂಬಲಾಗಿದೆ.

ಇಷ್ಟೆಲ್ಲ ಬೃಹತ್ ಆದ ದೇವಸ್ಥಾನಗಳು, ವಿಗ್ರಹಗಳು ಇರುವ ಈ ಊರಿನಲ್ಲಿ ಅಪರೂಪದ ಹಸ್ತಪ್ರತಿಗಳು, ಅಸಾಧಾರಣ ಶಿಲ್ಪಕಲೆಯ ಸಂಕೇತ ಎನ್ನುವಂಥ ಕಂಚಿನ ಪ್ರತಿಮೆಗಳೂ ಇವೆ. ಬೃಹದೀಶ್ವರನ ದರ್ಶನ ಮಾಡಿ ಭಕ್ತಿ ಸಮರ್ಪಿಸಿ ಹೋಗುವವರು ಇತ್ತ ಕಡೆ ಬರುವುದು ವಿರಳ.

ಒಂದು ಕಾಲದಲ್ಲಿ ಚೋಳರ ರಾಜಧಾನಿಯಾಗಿದ್ದ ತಂಜಾವೂರು ಶಿಲ್ಪಕಲೆ, ಸಂಗೀತ, ನೃತ್ಯ, ವಿದ್ಯೆ ಇತ್ಯಾದಿ ಎಲ್ಲವುಗಳ ತವರು ಎನಿಸಿತ್ತು. ಭರತನಾಟ್ಯ ಮತ್ತು ಕರ್ನಾಟಕ ಸಂಗೀತ ಜನ್ಮತಾಳಿದ್ದು ಇಲ್ಲಿ ಎಂದೂ ಹೇಳಲಾಗುತ್ತದೆ. ಆ ಎಲ್ಲ ಶಿಲ್ಪಕಲೆ, ನೃತ್ಯ, ವಿದ್ಯೆಯ ಒಂದು ಝಳಕ್ ನೋಡಬೇಕು ಎಂದರೆ ನೀವು ತಂಜಾವೂರಿನ ಅರಮನೆಯ ಆವರಣದದ ಸರಸ್ವತಿ ಮಹಲ್ ಗ್ರಂಥಾಲಯಕ್ಕೆ ಬರಬೇಕು. ಪಕ್ಕದ ಆರ್ಟ್ ಗ್ಯಾಲರಿ ಪ್ರವೇಶಿಸಬೇಕು.




ಬೃಹದೀಶ್ವರ ದೇವಸ್ಥಾನದ ಒಂದು ನೋಟ